DLSA/DK/495/2020

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದ.ಕ. ಜಿಲ್ಲೆ,
ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಮಂಗಳೂರು -575003.

ದಿನಾಂಕಃ 14.08.2020

# ಪ್ರಕಟಣೆ

ವಿಷಯಃ ದ.ಕ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಆಡಳಿತ ಸಹಾಯಕ/ಗುಮಾಸ್ತ ವ ಬೆರಳಚ್ಚುಗಾರ ಮತ್ತು ದಲಾಯತ್ ಹುದ್ದೆಗಳ ನೇಮಕಾತಿ ಬಗ್ಗೆ

ಉಲ್ಲೇಖಃ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ ಕೆ ಎಸ್ ಎಲ್ ಎಸ್ ಎಃ 113/ಎಡಿಎಂ/2012 ದಿನಾಂಕ 07.01.2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದ.ಕ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ಒಂದು ಆಡಳಿತ ಸಹಾಯಕ/ಗುಮಾಸ್ತ ವ ಬೆರಳಚ್ಚುಗಾರ ಮತ್ತು ಒಂದು ದಲಾಯತ್ ಹುದ್ದೆಗೆ ತಾತ್ಕಾಲಿಕವಾಗಿ ಮತ್ತು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತಂತೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿದ್ದು, ಆಯ್ಕೆಯಾದ ವ್ಯಕ್ತಿಗಳನ್ನು 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುವುದು.

ಸದರಿ ಹುದ್ದೆಗಳ ಪ್ರಸಕ್ತ ಮಾಸಿಕ ಸಂಭಾವನೆಯು ಕ್ರಮವಾಗಿ ರೂ14,866/- ಮತ್ತು ರೂ.11,387/- ಆಗಿದೆ.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಗಳಲ್ಲಿ ನಿವೃತ್ತ ಸರಕಾರಿ ನೌಕರರು ಇದ್ದಲ್ಲಿ ಮತ್ತು ಅಂತಹ ನಿವೃತ್ತ ನೌಕರರು ಸೂಕ್ತ ವ್ಯಕ್ತಿಗಳು ಎಂದು ಕಂಡು ಬಂದಲ್ಲಿ ಅವರನ್ನು ಪ್ರಾಶಸ್ತ್ಯದ ಮೇರೆಗೆ ನೇಮಕಾತಿಗೆ ಪರಿಗಣಿಸಲಾಗುವುದು.

ಎರಡೂ ಹುದ್ದೆಗಳಿಗೆ ಸಂಬಧಿಸಿದಂತೆ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಹಾಗೂ ಕಂಪ್ಯೂಟರ್ ಬಳಕೆಯ ತಿಳುವಳಿಕೆ ಹೊಂದಿದ ಅಭ್ಯರ್ಥಿಗಳಿಗೆ ಆಧ್ಯತೆಯನ್ನು ನೀಡಲಾಗುವುದು.

-2-

ಈ ನೇಮಕಾತಿಯು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರು ಕಾಲಕಾಲಕ್ಕೆ ಹೊರಡಿಸುವ ಆದೇಶಕ್ಕೆ ಬದ್ಧವಾಗಿರುತ್ತದೆ.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ 25.08.2020 ಕೊನೆಯ ದಿನಾಂಕವಾಗಿರುತ್ತದೆ.

ಆಸಕ್ತರು ತಮ್ಮ ಹೆಸರು, ವಿಳಾಸ, ವಿದ್ಯಾರ್ಹತೆ, ಇ-ಮೇಲ್, ಮೊಬೈಲ್ ಸಂಖ್ಯೆ ಇತ್ಯಾದಿ ವಿವರಗಳನ್ನು ಹೊಂದಿರುವ ಅರ್ಜಿಯನ್ನು ಪೂರಕ ದಾಖಲೆಗಳ ಪ್ರತಿಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಮೇಲೆ ಹೇಳಿದ ಕೊನೆಯ ದಿನಾಂಕದ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ದ.ಕ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಮಂಗಳೂರು -575003 ರವರಿಗೆ ಸಲ್ಲಿಸಬಹುದು.

ಆಸಕ್ತರು ಪ್ರಾಧಿಕಾರದ ಇ-ಮೇಲ್ - dlsamangalore@gmail.com ಗೆ ಇ-ಮೇಲ್ ಮೂಲಕವೂ ಅರ್ಜಿಯನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಬಹುದು.

ಕೊನೆ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

17/8/2020

ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ದಕ್ಷಿಣ ಕನ್ನಡ, ಮಂಗಳೂರು.

ಪ್ರತಿಗಳು:

(1) ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದ.ಕ. ಇವರ ಕಚೇರಿ ನೋಟಿಸ್ ಬೋರ್ಡ್ ಗೆ.
(2) ಮಾನ್ಯ ಜಿಲ್ಲಾಧಿಕಾರಿಗಳು ದ.ಕ. ಮಂಗಳೂರು ಇವರ ಕಚೇರಿ ನೋಟಿಸ್ ಬೋರ್ಡ್ ಗೆ.
(3) ಮಾನ್ಯ ಪೊಲೀಸ್ ಆಯುಕ್ತರು ಮಂಗಳೂರು ನಗರ ಇವರ ಕಚೇರಿ ನೋಟಿಸ್ ಬೋರ್ಡ್ ಗೆ .
(4) ವಕೀಲರ ಸಂಘ, ಮಂಗಳೂರು, ನೋಟಿಸ್ ಬೋರ್ಡ್ ಗೆ.
(5) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಗಳೂರು ಇವರ ಕಚೇರಿ ನೋಟಿಸ್ ಬೋರ್ಡ್ ಗೆ.
(6) ಕಚೇರಿ ನೋಟಿಸ್ ಬೋರ್ಡ್ ಗೆ .